# ಆಹಾ ಸುದ್ದಿ!

★ ಸಸಿತೋಟ

ಬ್ರೆಜಿಲ್‌ನಲ್ಲಿ ಈ ವರ್ಷ ನಡೆಯಲಿರುವ ವಿಶ್ವ ಕಪ್ ಫುಟ್ಬಾಲ್ ಪಂದ್ಯಗಳಲ್ಲಿ ದಢೂತಿ ಪ್ರೇಕ್ಷಕರಿಗೆ ಟಿಕೆಟ್ ಮೇಲೆ ಶೇ. 50ರಷ್ಟು ರಿಯಾಯ್ತಿ ನೀಡುತ್ತಾರಂತೆ. ಅದೂ ಜಾಸ್ತಿ ಅಗಲ ಇರುವ ಸೀಟ್ ನೀಡುತ್ತಾರಂತೆ. ಅಲ್ಲಿ ದಢೂತಿಗಳನ್ನು ವಿಶೇಷ ಕಾಳಜಿ ಅಗತ್ಯವಿರುವ ವ್ಯಕ್ತಿಗಳೆಂದು ಗುರುತಿಸಿದ್ದು ಈ ರಿಯಾಯ್ತಿಯಂತೆ. ರಿಯಾಯ್ತಿ ಪಡೆಯಲು ಸಣಕಲು ವ್ಯಕ್ತಿಗಳೂ ಈಗಿನಿಂದಲೇ ವಿಶೇಷ ತಯಾರಿ ಆರಂಭಿಸಿರಬಹುದು.



ಉಕ್ರೇನಿನಲ್ಲಿ ಸರ್ಕಾರಿ ವಿರೋಧಿ ಚಳವಳಿ ವರ್ಷದಿಂದ ನಡೆಯುತ್ತಲೇ ಇದೆ. ಹಾಗಂತ ನಡೆಯುವುದನ್ನು ನಿಲ್ಲಿಸಲು ಸಾಧ್ಯವೇ? ಚಳವಳಿ ನಿರತರಲ್ಲಿ ಗಂಡು- ಹೆಣ್ಣಿನ ಮಧ್ಯೆ ಪ್ರೀತಿ ಏರ್ಪಟ್ಟು ಮದುವೆಯೂ ಆಯಿತು. ಅದೂ ಪ್ರತಿಭಟನಾಕಾರರು ವಶಪಡಿಸಿಕೊಂಡ ಮುನ್ಸಿಪಲ್ ಕಟ್ಟಡದಲ್ಲಿ. ಮದುವೆ ಛತ್ರದ ಬಾಡಿಗೆಯನ್ನೂ ಉಳಿಸಿದ ಜೋಡಿ ಹೆರಿಗೆ ಆಸ್ಪತ್ರೆಯ ವೆಚ್ಚವನ್ನೂ ಉಳಿಸುವರೇ ಎಂದು ಕಾದು ನೋಡಬೇಕು.



ಆಸ್ಟ್ರಿಯಾದ ವಿಯೆನ್ನಾ ಮೂಲದ ಈ ತರಕಾರಿ ವಾದ್ಯ ತಂಡದವರು ಅವುಗಳನ್ನು ಕೆತ್ತುವುದರಲ್ಲೂ ನಿಪುಣರು. ಕ್ಯಾರಟ್, ದೊಣ್ಣೆ ಮೆಣಸು ಮೊದಲಾದವುಗಳಿಂದ ಸಂಗೀತ ಉಪಕರಣಗಳನ್ನು ನೀಟಾಗಿ ಕೆತ್ತುವ ತಂಡದವರು ಆ ತರಕಾರಿ ಚೂರುಗಳನ್ನೆಲ್ಲ ಏನು ಮಾಡುತ್ತಾರೆ ಎಂಬ ಕುತೂಹಲ ಹಲವರಲ್ಲಿತ್ತು. ಅದು ಪ್ಯಾರಿಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೊತ್ತಾಯಿತಂತೆ. ತರಕಾರಿ ಚೂರುಗಳಿಂದ ಸೂಪ್ ತಯಾರಿಸಿ ಶ್ರೋತೃಗಳಿಗೆ ಕುಡಿಸುತ್ತಾರಂತೆ. ಸೂಪ್ ರುಚಿಯನ್ನು ನಾಲಗೆ ನೋಡುತ್ತಿದ್ದರೆ, ಸಂಗೀತದ ಕಡೆ ಲಕ್ಷ್ಯ ಕೊಡಲು ಕಿವಿ ಸೋಲುತ್ತದೆ ಎಂಬ ಉಪಾಯ ಇರಬಹುದು.



ಮೆಕ್ಸಿಕೋದ ಈ ವ್ಯಕ್ತಿ ಜೋಸ್ ಕಳೆದ 13 ತಿಂಗಳುಗಳ ಕಾಲ ಪೆಸಿಫಿಕ್ ಸಾಗರದಲ್ಲಿ ದಿಕ್ಕು ತಪ್ಪಿ ದೋಣಿಯೊಂದರಲ್ಲಿ ಅಲೆದಾಡಿದ. ಕಳೆದ ವಾರ ಪೆಸಿಫಿಕ್‌ನ ಮಜುರೊ ಹವಳದ ದಿಬ್ಬಕ್ಕೆ ಬಂದು ಬಿದ್ದವನದ್ದು ರೋಚಕ ಕಥೆ. ಆತನನ್ನು ಉಳಿಸಿದ್ದು ಯಾವುದು ಗೊತ್ತೇ? ಟಾರ್ಟಿಲ್ಲಾ (ಮುಸುಕಿನ ಜೋಳದ ತಿಂಡಿ) ತಿನ್ನುವ ಕನಸಂತೆ. ಅದನ್ನು ತಿನ್ನಲು ಭೂಭಾಗಕ್ಕೇ ಬರಬೇಕಲ್ಲ!



ಚೀನಾದಲ್ಲಿ ಕ್ವಿಗಾಂಗ್ ಎಂದರೆ ಖಡ್ಗವನ್ನು ನುಂಗುವ ಸಾಂಪ್ರದಾಯಕ ಕಲೆಯಿದೆ. ಅಲ್ಲಿ ಸದ್ಯ ನಡೆಯುತ್ತಿರುವ ಹೊಸ ವರ್ಷದ ಆಚರಣೆಯ ಸಂದರ್ಭ ಕಲಾವಿದನೊಬ್ಬ ಖಡ್ಗ ನುಂಗುವಾಗ ಪಾಶ್ಚಿಮಾತ್ಯ ದೇಶಗಳ ಪ್ರವಾಸಿಗರು ಬೆರಗಾಗಿ ನೋಡಿದರಂತೆ. ಮೂಲ ಎಲೆಕ್ಟ್ರಾನಿಕ್ ಸಾಮಗ್ರಿಗಳ ಸ್ವರೂಪವನ್ನೇ ನುಂಗಿ ನಕಲಿಯನ್ನು ಉಗುಳುವ ಚೀನಾದವರು ಖಡ್ಗ ನುಂಗುವುದೇನು ಮಹಾ ಎಂದರಂತೆ.

ಜಪಾನಿನಲ್ಲಿ ಒಳ ಉಡುಪು ಕಂಪೆನಿಯೊಂದು ವಿಶೇಷ ಕಂಚುಕವನ್ನು ಸಿದ್ಧಪಡಿಸಿದೆಯಂತೆ. ಅದರ ಹೆಸರೇ 'ಟ್ರೂ ಲವ್'. ಅದನ್ನು ಧರಿಸಿದ ಯುವತಿಗೆ ನಿಜವಾದ ಪ್ರೀತಿಯ ಅನುಭವವಾದಾಗ ಹೃದಯದ ಬಡಿತ ಹೆಚ್ಚಾಗಿ ಅದಕ್ಕೆ ಜೋಡಿಸಿದ ಆ್ಯಪ್ ಬಡಿತವನ್ನು ಲೆಕ್ಕ ಹಾಕುತ್ತದೆ. ಅಷ್ಟೇ ಅಲ್ಲ, ಹುಕ್ ತಾನಾಗಿ ತೆರೆಯುತ್ತದಂತೆ. ವ್ಯಾಲೆಂಟೈನ್ ದಿನದ ಗಿಮಿಕ್ ಆದರೂ ಹುಕ್ ತೆರೆಯಲು ಇಷ್ಟೆಲ್ಲಾ ಕಷ್ಟಪಡುವುದು ಏಕೆ ಎಂದು ಆನ್‌ಲೈನ್ ಪತ್ರಿಕೆಯೊಂದು ವ್ಯಂಗ್ಯ ಮಾಡಿದೆಯಂತೆ.